ಸೇನಾಧಿಪತಿ ಕುಳ್ಳ ಶರೀರದ ಗಜನು ಈ ಭೂತವನ್ನು ಹೇಗಾದರೂ ದಾಶರಥಿಯಿಂದ ದೂರಕ್ಕೆ ಕೊಂಡೊಯ್ಯಬೇಕೆಂದು ಒಂದು ಉಪಾಯವನ್ನು ಯೋಚಿಸಿದನು.

ಅವನು ರಾಕ್ಷಸನ ಹಿಂದಿನಿಂದ ಹೋಗಿ ಬೆನ್ನಿಗೆ ಗುದ್ದಿದನು. ದಾನವನು ಸಿಟ್ಟಿನಿಂದ ಉರಿದು ತಿರುಗಿದನು. ಹತ್ತಿರದಲ್ಲಿ ನಿಂತು ನಗುತ್ತಿದ್ದ ಮಹಾಕುಳ್ಳನನ್ನು, ಹಾಸ್ಯನೇತ್ರದ, ವಿನೋದ ಮುಖದವನನ್ನು ನೋಡಿದನು. ಹಿಡಿಯಲೆಂದು ಎಡಗೈ ಚಾಚಿ ಬರಿಗಾಳಿ ಬಾಚಿದನು! ಗಜನು ನೆಲಮಟ್ಟಕ್ಕೆ ಬಗ್ಗಿ, ಜಾರಿ ಎಗರಿ ಚಿಮ್ಮಿ ಸರ್ರನೆ ಹಿಮ್ಮೆಟ್ಟಿದನು.

ಗಿರ್ರನೆ ತಿರುಗಿಬಂದು ಮತ್ತೆ ಅವನ ಬೆನ್ನಿಗೆ ಗುದ್ದಿದನು. ವಿಷಾದಕ್ಕೊಳಗಾಗಿ ಖಿನ್ನ ಮನಸ್ಕರಾಗಿದ್ದ ವಾನರ ಸೇನೆಯಲ್ಲಿ ಆಶ್ಚರ್ಯ ಉಂಟಾಗಿ ಗೊಳ್ಳೆಂದು ನಗೆಯೆದ್ದಿತು!

ಇಂದ್ರನ ವೈರಿ ಕುಂಭಕರ್ಣನು ಮುನಿದು, ಅತಿಯಾಗಿ ಕೋಪಗೊಂಡು ಮತ್ತೆ ತಿರುಗಿದನು. ಅವನು ಅತ್ತ ತಿರುಗಿದರೆ ಗಜನು ಇತ್ತ ನೆಗೆದನು. ಅವನು ಇತ್ತ ತಿರುಗಿದರೆ ಗಜನು ಅತ್ತ ನೆಗೆದನು. ತಿರುಗಿದನು, ಸುತ್ತಿದನು; ಸುತ್ತಿದನು, ತಿರುಗಿದನು. ತಿ ರು ತಿ ರು ಗಿ ರಕ್ಕಸನ ತಲೆ ತಿರುಗತೊಡಗಿತು. ಕಣ್ಣು ಸುತ್ತಿ, ಕಾಲ್ತೊಡರಿ, ತತ್ತರಿಸುತ್ತ ಹೇಗೊ ನಿಂತನು. ಶೂಲವನ್ನು ತೆಗೆದುಕೊಳ್ಳಲು ಕೈ ಹಾಕಿದನು. ಅದನ್ನು ನೋಡಿ ಗಜನು, ಅಲ್ಲಿ ನಿಲ್ಲದೆ ನಗುತ್ತ ಓಡಿದನು. ರಾಕ್ಷಸನ ಎದೆ ಉರಿದುಹೋಯಿತು. 'ನೀನು ಕಪಿ, ಕಪಿಧ್ವಜನಲ್ಲ! ನಿನ್ನನ್ನು ಹೊಸಕಿ ಹಾಕದೆ ಬಿಡುತ್ತೇನೆಯೇ?' ಎಂದು ಮಹಾಶೂಲವನ್ನು ಹಿಡಿದು ಅವನ ಬೆನ್ನು ಹತ್ತಿದನು.

***

ಪೀಡಿಸಿದ ತೋಳವನ್ನು ಕಾಡಾನೆಯು ಅಟ್ಟುವಂತೆ, ಗಜನನ್ನು ಅಟ್ಟುತ್ತಿದ್ದ ಕುಂಭಕರ್ಣನನ್ನು ನೋಡಿ ಉಭಯ ಸೇನೆಗಳು ನಗೆಗಡಲಿನಲ್ಲಿ ಮುಳುಗಿದವು!

ರಾಕ್ಷಸರು ಅವನನ್ನು ನೋಡಿ 'ಕಪಿ ವೀರನನ್ನು ನೋಡಿರೊ! ಪಲಾಯನ ಪಟುಭಟನ ಚಟುಲ ವೇಗವನ್ನು ನೋಡಿ! ಧೀರನೇ ಸರಿ! ನೋಡಿ, ನಿಜವಾಗಿಯೂ ಇವನು ಸ್ವರ್ಗವನ್ನು ಕೊಳ್ಳೆಹೊಡೆಯಲು ಹೋಗುತ್ತಿರುವ ಧೈರ್ಯಶಾಲಿ! ವೀರರೇ, ಷಂಡನಾದ ಇವನಿಂದ ಕಲಿತನದ ವಿದ್ಯೆ ಕಲಿಯಿರಿ!' ಎಂದು ತಮ್ಮ ತಮ್ಮಲ್ಲಿ ಹೇಳಿಕೊಳ್ಳುತ್ತ, ಅಳ್ಳೆ ಬಿರಿಯುವಂತೆ ನಗುತ್ತಿದ್ದರು.

ತಮ್ಮ ಹಾಸ್ಯಪ್ರಿಯನ ನೂತನ ಪ್ರಹಸನ ಪ್ರಸ್ತಾವನೆಯ ಚತುರ ಸೂತ್ರಧಾರಿತ್ವನ್ನು ಕಂಡ ಕಪಿಧ್ವಜರು,

'ನೋಡಿರೊ, ರಾಕ್ಷಸನ ಮತಿಗೆ ಕಳ್ಳು ಕುಡಿಸಿ, ಓಟಕ್ಕೆ ಮೂಗುದಾರವನ್ನಿಕ್ಕಿದ್ದಾನೆ. ಸೇನೆಯ ಬೇಸರವನ್ನು ಹೋಗಲಾಡಿಸಲು, ಕುಣಿಕುಣಿಸಿ ಸೆಳೆದೊಯ್ಯುತ್ತಿದ್ದಾನೆ ನಮ್ಮ ಹಾಸ್ಯ ವಿದ್ಯಾ ಕುಶಲ ಸೇನಾನಿ! ಬನ್ನಿ ನೋಡೋಣ! ಇದಕ್ಕೆ ಕೊಡಬೇಕಾದ್ದು ನಿಮ್ಮ ಉಲ್ಲಾಸದ ಕಾಣಿಕೆ! ನೋಡೋಣ ಬನ್ನಿ, ಕುಂಭಕರ್ಣನ ಕರಡಿಯಾಟವನ್ನು!' ಎಂದು ತಮ್ಮ ಸೋಲನ್ನು ಮರೆತು ನಗತೊಡಗಿದರು!

***

ಕುಳ್ಳ ಗಜನು ಮುಟ್ಟಿ ತಟ್ಟಿದನು. ಆಗ ಅವನನ್ನು ಹಿಡಿಯಲೆಂದು ಕುಂಭಕರ್ಣನು ತನ್ನ ಎಡದ ತೋಳು ಸೊಂಡಿಲನ್ನು ಚಾಚಿದನು. ಗಜನು ಅದರ ಮೇಲೆ ಚಕ್ಕನೆ ನಿಂತು, ಪಕ್ಕಕ್ಕೆ ಚಿಮ್ಮಿ ದಿಕ್ಕು ತಪ್ಪಿಸಿ, ಬೇರೆ ದಿಕ್ಕಿಗೆ ಓಡಿದನು. ಸ್ಥೂಲಕಾಯನಾದ ರಾಕ್ಷಸನು ತನ್ನ ರಭಸಕ್ಕೆ ತಾನೇ ಮುಂದೋಡಿದನು! ಮನಸ್ಸು ಹಿಂದಕ್ಕೆ ಎಳೆಯಿತು. ದೇಹವೇಗವು ಆ ಕಡೆಗೆ ಕಾಲುಗಳನ್ನು ಎಳೆಯಿತು. ಚಿತ್ತವೇಗವು ಭಾರೀ ಶರೀರವನ್ನು ಈ ಕಡೆಗೆ ಎಳೆಯಿತು. ಹಾಗಾಗಿ ಅತ್ತಲಿತ್ತ ತೂಗಿ ತೊನೆದನು!

ಅದನ್ನು ನೋಡಿದ ಎರಡೂ ಕಡೆಯ ಸೈನಿಕರಲ್ಲಿ ನಗೆಯ ಹೊನಲು ಉಕ್ಕಿ ಹರಿಯಿತು. ಅವರು ಕುಸಿದು ಬೀಳುವಂತೆ ಗೊಳ್ಳನೆ ನಕ್ಕರು!

ಅವಮಾನಕ್ಕೊಳಗಾದ ಕುಂಭಕರ್ಣನು ಕನಲಿದನು. ಕಿಲಕಿಲನೆ ನಗುತ್ತ ಓಡುತ್ತಿದ್ದ ಕಪಿವೀರನನ್ನು ನೋಡಿ — ಕೋಪದ ಬೆಂಕಿ ಕಾಳ್ಗಿಚ್ಚಾಗಿ, ಅವನನ್ನು ಮತ್ತೆ ಬೆಂಬತ್ತಿದನು. ಗಜನು ಕೊಂಕಿ ಬಾಗುತ್ತ, ನಿಂತು ನೋಡುತ್ತ, ಬೆನ್ನ ಹಿಂದೆ ಬಳುಕಿ ಹೋಗಿ ಕಾಲುಗಳ ನಡುವೆ ಹೊಕ್ಕು ನುಣುಚಿಕೊಂಡನು!

ರಾಕ್ಷಸನು ಹೋಗಲಾರದ ಇಕ್ಕಟ್ಟಿನಲ್ಲಿ ನುಗ್ಗಿ ಸಿಕ್ಕಿಕೊಳ್ಳುವಂತೆ ಮಾಡಿದನು! ಅವಿತುಕೊಂಡಿದ್ದು, ಕಾಣಿಸುತ್ತ ಚಿಮ್ಮಿ ವಂಚಿಸುತ್ತ ತ್ರಿಕೂಟ ಲಂಕಾದುರ್ಗವನ್ನು ಮೂರು ಸುತ್ತು ಸುತ್ತಿಸಿದನು!

ಮುಡಿಗೆದರಿ, ಮೈಬೆವರಿ, ಏದುಸಿರು ಬಿಡುತ್ತ, ಅಳ್ಳೆಗಳು ಅದುರಿ, ರಕ್ತ ಸೋರಿಡುತ್ತಿರಲು ಕುಂಭಕರ್ಣನು ವಿಡಂಬನಾ ಭೈರವನಂತಹ ಹಾಸ್ಯ ಸ್ಥಿತಿಗೆ ಒಳಗಾದನು!

(ಆಧಾರ: 'ಶ್ರೀರಾಮಾಯಣ ದರ್ಶನಂ' ಸಂಪುಟ 4, ಸಂಚಿಕೆ 2: 'ರಸಮಲ್ತೆ ರುದ್ರ ದೃಷ್ಟಿಗೆ ರೌದ್ರಮುಂ')

ಪ್ರತಿಕ್ರಿಯಿಸಿ: **feedback@sudha.co.in**

